ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳ ಸಾಲ ವಸೂಲಾತಿಯು ಜನವರಿ 2007ರಿಂದ ಬಹುತೇಕ ಸ್ಥಗಿತಗೊಂಡಿರುತ್ತದೆ.

ಆ) ಇದರಿಂದಾಗಿ ಹಣಕಾಸು ಸಂಸ್ಥೆಗಳ ವಹಿವಾಟಿನ ಮೇಲೆ ವ್ಯತಿರಿಕ್ತ ಪರಿಣಾಮ ಆಗುತ್ತಿರುವ ಬಗ್ಗೆ ಸರ್ಕಾರದ ನಿಲುವು ಏನು?

2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ದಿನಾಂಕ 01.04.2006ರಿಂದ ಈಚೆಗೆ ರೈತರು ಪಡೆದಿರುವ 25,000 ರೂಪಾಯಿಗಳವರೆಗಿನ ಹಾಗೂ 31.12.2006 ರವರೆಗೆ ಬಾಕಿ ಉಳಿದಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ. ಸರ್ಕಾರವು ಮನ್ನಾ ಮಾಡಿರುವ ಸಾಲಗಳನ್ನು ಹೊರತುಪಡಿಸಿ ಉಳಿದ ಸಾಲಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಸಹಕಾರಿ ಸಂಸ್ಥೆಗಳು ಕ್ರಮ ತೆಗೆದುಕೊಳ್ಳುತ್ತವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1265(1758)**
ಸದಸ್ಯರ ಹೆಸರು	:	**ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ)**
ಉತ್ತರಿಸಬೇಕಾದ ಸಚಿವರು	:	**ಶ್ರೀ ಜೆ.ಟಿ.ದೇವೇಗೌಡ (ಸಹಕಾರ ಸಚಿವರು)**

ಅ.) ಬೆಂಗಳೂರು ಜಿಲ್ಲೆಯಲ್ಲಿನ ಸರ್ಕಾರಿ ಒತ್ತುವರಿ ಜಮೀನು ಹರಾಜು ಹಾಕಿ ರಾಜ್ಯದ ರೈತರ ಸಾಲ ಮನ್ನಾ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ? ಇದರಿಂದಾಗಿ ಬರಬಹುದಾದ ಅಂದಾಜು ಆದಾಯ ಎಷ್ಟು?

ಆ.) ರಾಜ್ಯದ ಎಲ್ಲಾ ವರ್ಗದ ರೈತರ ಬಾಕಿಯಿರುವ ಸಾಲದ ಮೊತ್ತ ಎಷ್ಟು?

2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ದಿನಾಂಕ 01.04.2006ರಿಂದ ಈಚೆಗೆ ರೈತರು ಪಡೆದಿರುವ 25,000 ರೂಪಾಯಿಗಳವರೆಗಿನ ಹಾಗೂ 31.12.2006 ರವರೆಗೆ ಬಾಕಿ ಉಳಿದಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ. ಈ ಸಂಬಂಧದಲ್ಲಿ ವಿವರವಾದ ಸರ್ಕಾರಿ ಆದೇಶವನ್ನು ಸದ್ಯದಲ್ಲೇ ಹೊರಡಿಸಲಾಗುವುದು

ಇ.) ಹಾಗಿದ್ದಲ್ಲಿ ಎಲ್ಲಾ ರೀತಿಯ ಬ್ಯಾಂಕ್ ಹಾಗೂ ಸಹಕಾರ ಸಂಘಗಳಿಂದ ಪಡೆದಿರುವ ಸಾಲವನ್ನು ಮನ್ನಾ ಮಾಡಲಾಗುವುದೇ?

ಮೇಲೆ ತಿಳಿಸಿದಂತೆ ಮನ್ನಾ ಮಾಡಲಾದ ಮೊಬಲಗನ್ನು ಸರ್ಕಾರವು ಆಯವ್ಯಯದಲ್ಲಿ ಅನುದಾನ ಒದಗಿಸುವ ಮೂಲಕ ಸಂಬಂಧಪಟ್ಟ ಸಹಕಾರ ಸಂಸ್ಥೆಗಳಿಗೆ ಭರಿಸಿಕೊಡುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1266(1759)**
ವಿಧಾನ ಸಭಾ ಸದಸ್ಯರ ಹೆಸರು	:	**ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ)**
ಉತ್ತರಿಸುವವರು	:	**ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ. ಭಾಗ್ಯಲಕ್ಷ್ಮಿ ಯೋಜನೆಯಡಿ ಉಡುಪಿ ತಾಲ್ಲೂಕಿನಲ್ಲಿ 1-4-06 ರಿಂದ ಎಷ್ಟು ಅರ್ಜಿಗಳು ಬಂದಿದೆ ಮತ್ತು ಎಷ್ಟು ಹೆಣ್ಣು ಮಕ್ಕಳ ಹೆಸರಿನಲ್ಲಿ ಠೇವಣಿ ಇಡಲಾಗಿದೆ?

ಭಾಗ್ಯಲಕ್ಷ್ಮಿ ಯೋಜನೆಯಡಿ ಉಡುಪಿ ತಾಲ್ಲೂಕಿನಲ್ಲಿ ದಿನಾಂಕ:1-4-2006ರಿಂದ ಫೆಬ್ರವರಿ 2007ರ ಅಂತ್ಯದಲ್ಲಿ 725 ಅರ್ಜಿಗಳು ಬಂದಿವೆ. ಪಾಲುದಾರ ಹಣಕಾಸು ಸಂಸ್ಥೆಯ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಫಲಾನುಭವಿಗಳ ಹೆಸರಿನಲ್ಲಿ ಠೇವಣಿ ಇಡಲಾಗುವುದು. ಸದ್ಯಕ್ಕೆ ಹಣವನ್ನು ಭಾಗ್ಯಲಕ್ಷ್ಮಿ ಸಾರ್ವಜನಿಕ ದತ್ತಿಯಲ್ಲಿ ಇರಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1267(1760)**
ಸದಸ್ಯರ ಹೆಸರು	:	**ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ)**
ಉತ್ತರಿಸುವ ಸಚಿವರು	:	**ಶ್ರೀ ಬಂಡೆಪ್ಪ ಖಾಶಂಪೂರ (ಕೃಷಿ ಸಚಿವರು)**

ಅ) ಸುವರ್ಣ ಕೃಷಿ ಹೊಂಡ ಯೋಜನೆಯಡಿ ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು).